ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:1864/2ಸಿ019

ಚಾಸಾ:3 ಪ್ರಾಸಾ:3

ದಿನಾಂಕ: 11.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಆದರ್ಶ ಶೆಟ್ಟಿ |
| ತಂದೆಯ ಹೆಸರು | : | ಅಶೋಕ ಕುಮಾರ ಶೆಟ್ಟಿ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ ಸ್ಥಳ | : | ಬನ್ನಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಚಾಸಾ-1 ಮತ್ತು 2 ನನ್ನ ತಂದೆ ಮತ್ತು ತಾಯಿ. 1 ಮತ್ತು 2ನೇ ಆರೋಪಿತರು ನನ್ನ ದೊಡ್ಡಮ್ಮ ಮತ್ತು ದೊಡ್ಡಪ್ಪ.

ದಿ: 23-12-2018 ರಂದು ಬೇಳೂರಿನ ನಮ್ಮ ತಾಯಿ ಮನೆಯಲ್ಲಿ ಪಂಚಾಯಿತಿಗಾಗಿ ನಾನು, ಚಾಸಾ-1, 2, 4, 5ರವರು ಹೋಗಿದ್ದಾಗ ಆಸ್ತಿಯ ಮಾತುಕತೆ ನಡೆದಿದ್ದು ನಿರ್ಣಯವಾಗದೆ ಇದ್ದಾಗ ನನ್ನ ಅಜ್ಜಿಯ ಹೆಸರಿನಲ್ಲಿ ಇದ್ದ ಜಾಗದಲ್ಲಿ ನನ್ನ ಮಾವನಾದ ಪ್ರಸನ್ನ ಶೆಟ್ಟಿರವರು ಮನೆ ನಿರ್ಮಿಸುತ್ತಿದ್ದ ಜಾಗದಲ್ಲಿ ಚಾಸಾ-1 ರವರು ತಡೆಯಲು ಮುಂದಾದಾಗ ಪ್ರಸನ್ನ ಶೆಟ್ಟಿರವರು ಚಾಕುವಿನಿಂದ ಚಾಸಾ-1 ರವರ ಎಡ ಮುಂಗೈಗೆ ಇರಿದಿರುತ್ತಾರೆ. ಆರೋಪಿತರು ಅವಾಚ್ಯವಾಗಿ ನಿಂಧಿಸಿ ರಾಡ್ ನಿಂದ 1ನೇ ಆರೋಪಿ ಚಾಸಾ-1 ರವರ ಬೆನ್ನಿಗೆ ಹೊಡೆದಿರುತ್ತಾರೆ. ಜಯನಂದಾ ಖಾರ್ವಿರವರು ಅವಾಚ್ಯವಾಗಿ ನಿಂಧಿಸಿರುತ್ತಾರೆ.

ಅನಂತರ ನಾವು ಚಾಸಾ-1 ರವರು ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಘಟನೆಯು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ನಡೆದಿರುತ್ತದೆ. ಜಾಗದಲ್ಲಿ ಪಾಲು ಕೊಡಲಾಗುವುದಿಲ್ಲ ಆಸ್ತಿ ವಿಚಾರದಲ್ಲಿ ಪ್ರಶ್ನಿಸಿದರೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. 2ನೇ ಆರೋಪಿಯು ಚಾಸಾ-1 ರವರ ಜುಟ್ಟು ಹಿಡಿದು ಎಳೆದಾಡಿರುತ್ತಾರೆ. ಹಲ್ಲೆಯಿಂದ ಚಾಸಾ-1 ರವರಿಗೆ ರಕ್ತಗಾಯವಾಗಿದ್ದು, ಬಟ್ಟೆಗೆ ರಕ್ತ ತಾಗಿರುವುದಲ್ಲದೆ ಆಕೆಯ ಬಟ್ಟೆ ಹರಿದಿರುತ್ತದೆ. ಘಟನೆಯ ವೇಳೆಗೆ ಮಮತಾ ಶೆಟ್ಟಿರವರು ಇದ್ದು

ಅವರು 2ನೇ ಆರೋಪಿಯೊಂದಿಗೆ ತಳ್ಳಿರುತ್ತಾರೆ ಹಾಗೂ ಅವಾಚ್ಯವಾಗಿ ನಿಂಧಿಸಿ ಹಲ್ಲೆ ಮಾಡಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

ಸಾಕ್ಷಿ ಮುಮಾ1 ರಿಂದ 4ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**